O.S. 625/2017

DW1

ದಿನಾಂಕಃ **05.07.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ **ವಿ.ಕೆ.** ರವರಿಂದಃ

**2001** ನೇ ಇಸವಿಯಿಂದ **4** ನೇ ಪ್ರತಿವಾದಿ ಲಕ್ಷ್ಮೀನಾರಾಯಣ ನನಗೆ ಪರಿಚಯ. ನನ್ನ ಮದುವೆಯು **4** ನೇ ಪ್ರತಿವಾದಿ ಮಗಳೊಂದಿಗೆ **2001** ರಲ್ಲಿ ನಡೆದಿರುತ್ತದೆ. ನಾನು ಬಿ.ಇ, ಎಂ.ಬಿ.ಎ ಪದವೀಧರ. ನಾನು ಕೆ.ಇ.ಬಿ ಉದ್ಯೋಗಕ್ಕೆ **1999** ನೇ ಇಸವಿಯಲ್ಲಿ ಸೇರಿಕೊಂಡಿರುತ್ತೇನೆ. **2015** ನೇ ಇಸವಿಯಲ್ಲಿ ನಾನು ನನ್ನ ಉದ್ಯೋಗದಲ್ಲಿ ಪದೋನ್ನತಿ ಪಡೆದಿರುತ್ತೇನೆ. ನನ್ನ ಪತ್ನಿ ಕೋಕಿಲವಾಣಿ ಬಿ.ಕಾಂ ಪದವಿ ಪಡೆದಿರುತ್ತಾರೆ. ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ **4** ನೇ ಪ್ರತಿವಾದಿ ಆಗಲಿ ಅಥವಾ ನನ್ನ ಪತ್ನಿ ಆಗಲಿ ವಕೀಲರಿಂದ ಕಾನೂನು ಸಲಹೆಯನ್ನು ಮೌಖಿಕವಾಗಿ ಪಡೆದುಕೊಂಡಿರುತ್ತಾರೆ ಆದರೆ ಈ ಬಗ್ಗೆ ಯಾವುದೇ ಲಿಖಿತ ದಾಖಲೆ ಇರುವುದಿಲ್ಲ.

ನನ್ನ ಪತ್ನಿ ಕೋಕಿಲ ವಾಣಿಗೆ ಬೆನ್ನು ನೋವು ಇದ್ದು ಬೆಡ್ ರೆಸ್ಟ್ ಬೇಕಾಗಿರುತ್ತದೆ. ನನ್ನ ಪತ್ನಿ ಸಲ್ಲಿಸಿದರುವ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತು ವಾದಿಗೆ ಸೇರಿದ ಸ್ವತ್ತು ಎಂದು ತನ್ನ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ಕೋಕಿಲ ವಾಣಿಯು ದಾವಾ ಸ್ವತ್ತನ್ನು ವಾದಿ ಕೃಷ್ಣಪ್ಪನ ಸ್ವತ್ತು ಎಂದು ಒಪ್ಪಿಕೊಂಡಿದ್ದು ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯ ಹೊರ ಬರುತ್ತದೆ ಎಂಬ ಉದ್ದೇಶದಿಂದ

ಕೋಕಿಲವಾಣಿಗೆ ಆರೋಗ್ಯ ಸಮಸ್ಯೆ ಇರುತ್ತದೆ ಎಂದು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಯಂತಿ ನಗರ ಸರ್ವೆ ನಂ.**73** ಜಮೀನಿನಲ್ಲಿ ಸೈಟ್ ನಂ.**102**ನ್ನು ನಿರ್ಮಾಣ ಮಾಡಲಾಗಿರುತ್ತದೆ. ಸೈಟ್ ನಂ.**102,** ಸೈಟ್ ನಂ.**118** ಆಗಿ ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿಯೇ ಆಗಿರುತ್ತದೆ. ಸೈಟ್ ನಂ.**102** ಮತ್ತು ಸೈಟ್ ನಂ.**118** ಒಂದೇ ಸೈಟ್ ಎಂದು ನಾನು ದಾಖಲೆಗಳ ಮೂಲಕ ತಿಳಿದುಕೊಂಡಿರುತ್ತೇನೆ. ಸಾಕ್ಷಿಗೆ ಯಾವ ದಾಖಲೆಯನ್ನು ನೀವು ನೋಡಿರುತೀರಾ ಎಂದರೆ ಸಾಕ್ಷಿಯು ಕ್ರಯ ಪತ್ರ ಮತ್ತು ಕಂದಾಯ ರಶೀದಿಗಳು ಎಂದು ಹೇಳುತ್ತಾರೆ. ಸೈಟ್ ನಂ.**102, 118** ಎಂದು ಬಿಬಿಎಂಪಿ ಕಛೇರಿ ಅಥವಾ ತಾಲ್ಲೂಕು ಕಛೇರಿ ಅಥವಾ ಪಂಚಾಯಿತಿ ಕಛೇರಿಯಲ್ಲಿ ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸೈಟ್ ನಂ.**102, 118** ಎನ್ನುವ ಬದಲಾವಣೆಗೊಳ್ಳುವುದಕ್ಕೆ ಸಂಬಂಧಿಸಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಡಲಾಗಿರುತ್ತದೆಯೇ ಎಂದರೆ ಸಾಕ್ಷಿಯು ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಈ ಬಗ್ಗೆ ಯಾವುದೇ ದಾಖಲೆಯನ್ನು ನೀಡದಿದ್ದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-**8** ಹಕ್ಕು ಪತ್ರದಂತೆ ಕೃಷ್ಣಪ್ಪ ರವರಿಗೆ ದಾವಾ ಸ್ವತ್ತು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಕೃಷ್ಣಪ್ಪನ ಮಗ ಮುನಿರಾಜು ನಿಡಿ-**7** ಹಕ್ಕು ಪತ್ರವನ್ನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-**7** ಹಕ್ಕು

ಪತ್ರದಲ್ಲಿ ನಮೂದಾಗಿರುವ ಮುನಿರಾಜು ರವರಿಗೆ ಸಂಬಂಧಿಸಿದ ವಂಶವೃಕ್ಷಯವನ್ನು ನ್ಯಾಯಾಲಯಕ್ಕೆ ಕೊಡಲು ಆಗುತ್ತದೆಯೇ ಎಂದರೆ ಸಾಕ್ಷಿಯು ಆಗುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.